ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 97-K**
**Code No. : 97-K**

# C

**CCE PF**
**CCE PR**
**NSR & NSPR**

Question Paper Serial No. **302**

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ
**TEAR HERE TO OPEN THE QUESTION PAPER**

ಇಲ್ಲಿಂದ ಕತ್ತರಿಸಿ
**Tear here**

# ವಿಷಯ : ರಾಜ್ಯಶಾಸ್ತ್ರ
# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh & Private Repeater / NSR & NSPR)**

ದಿನಾಂಕ : 11. 04. 2022 ] [ Date : 11. 04. 2022
ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.
ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I.** **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. 1773 ರಲ್ಲಿ ಸರ್ವೋಚ್ಛ ನ್ಯಾಯಾಲಯ ಸ್ಥಾಪನೆಯಾದದ್ದು

   (A) ದೆಹಲಿ

   (B) ಬೆಂಗಳೂರು

   (C) ಬಾಂಬೆ

   (D) ಕಲ್ಕತ್ತ

2. 1934 ರಲ್ಲಿ ಸಂವಿಧಾನ ರಚನಾ ಸಭೆಯ ಸ್ಥಾಪನೆಗೆ ಆಗ್ರಹಿಸಿದವರು

   (A) ಮೊತಿಲಾಲ್ ನೆಹರೂ

   (B) ಮಹಾತ್ಮ ಗಾಂಧಿ

   (C) ಮನ್ವೇಂದ್ರನಾಥ್ ರಾಯ್

   (D) ಡಾ. ಬಿ.ಆರ್. ಅಂಬೇಡ್ಕರ್

3. ನಮ್ಮ ಸಂವಿಧಾನವನ್ನು ಅಂಗೀಕರಿಸಿದ್ದು

(A) 1944 ರ ಡಿಸೆಂಬರ್ 11 ರಂದು

(B) 1949 ರ ನವೆಂಬರ್ 26 ರಂದು

(C) 1951 ರ ಜನವರಿ 26 ರಂದು

(D) 1956 ರ ಮಾರ್ಚ್ 23 ರಂದು

4. "ಪ್ರಸ್ತಾವನೆ ಸಂವಿಧಾನದ ಸತ್ಯ, ಇದು ಸಂವಿಧಾನದ ಯೋಗ್ಯತೆಯನ್ನು ಅಳೆಯಲು ಇರುವ ಒಂದು ಅಳತೆಗೋಲು" ಎಂದು ವ್ಯಾಖ್ಯಾನಿಸಿದವರು

(A) ಠಾಕೂರ್‌ದಾಸ್ ಭಾರ್ಗವ

(B) ಡಿ.ಪಿ. ಕೇತನ್

(C) ಬಿ.ಎಲ್. ಮಿತ್ತರ್

(D) ಕೆ.ಎಂ. ಮುನ್ಷಿ

5. ಸಂವಿಧಾನದ 21 'ಎ' ವಿಧಿಯು ಸಂಬಂಧಿಸಿರುವುದು

(A) ಮೂಲಭೂತ ಕರ್ತವ್ಯಗಳಿಗೆ

(B) ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ

(C) ಪ್ರಧಾನ ಮಂತ್ರಿಯ ನೇಮಕಾತಿಗೆ

(D) ರಾಷ್ಟ್ರಪತಿಯವರ ಪದಚ್ಯುತಿಗೆ

6. ಮೂಲಭೂತ ಕರ್ತವ್ಯಗಳು ನಮ್ಮ ಸಂವಿಧಾನಕ್ಕೆ ಸೇರ್ಪಡೆಯಾದ ವರ್ಷ

(A) 1976

(B) 1986

(C) 1996

(D) 2006

7. "ರಾಜ್ಯನೀತಿ ನಿರ್ದೇಶಕ ತತ್ವಗಳು ಸಂವಿಧಾನದ ಅಂತರಾತ್ಮವಾಗಿವೆ" ಎಂದವರು

(A) ಕೆ.ಸಿ. ವ್ಹಿರ್

(B) ಹೆಚ್.ಜೆ. ಲಾಸ್ಕಿ

(C) ಗ್ರಾನ್‌ವಿಲ್ಲೇ ಆಸ್ಟಿನ್

(D) ಎನ್. ಮಾಧವರಾವ್

8. ಜಿಲ್ಲಾ ಸೆಷನ್ಸ್ ನ್ಯಾಯಾಲಯಗಳಲ್ಲಿ ತೀರ್ಮಾನಿಸುವ ಮೊಕದ್ದಮೆಗಳು

(A) ರಾಜ್ಯಗಳ ನಡುವಿನ ಮೊಕದ್ದಮೆಗಳು

(B) ನೀರಿನ ವಿವಾದದ ಮೊಕದ್ದಮೆಗಳು

(C) ಸಿವಿಲ್ ಮೊಕದ್ದಮೆಗಳು

(D) ಕ್ರಿಮಿನಲ್ ಮೊಕದ್ದಮೆಗಳು

9. ಕರ್ನಾಟಕ ರಾಜ್ಯ ಲೋಕ ಸೇವಾ ಆಯೋಗದ ಪ್ರಧಾನ ಕಛೇರಿ ಇರುವುದು

(A) ಬೆಂಗಳೂರಿನಲ್ಲಿ

(B) ಮಂಗಳೂರಿನಲ್ಲಿ

(C) ಮೈಸೂರಿನಲ್ಲಿ

(D) ಬೆಳಗಾವಿಯಲ್ಲಿ

10. ಈಶಾನ್ಯ ರಾಜ್ಯಗಳ ಜಂಟಿ ಲೋಕಸೇವಾ ಆಯೋಗದ ಕೇಂದ್ರ ಕಛೇರಿ ಇರುವುದು

(A) ಇಂಫಾಲ

(B) ದಿಸ್‌ಪುರ್

(C) ಕೊಹಿಮ

(D) ಅಗರತಲ

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | | ***B*-ಪಟ್ಟಿ** | |
|---|---|---|---|
| (A) | ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರು | (i) | ಬಿ.ಎನ್. ರಾವ್ |
| (B) | ಸಂವಿಧಾನ ರಚನಾ ಸಮಿತಿಯ ಖಾಯಂ ಅಧ್ಯಕ್ಷರು | (ii) | ಜವಾಹರಲಾಲ್ ನೆಹರೂ |
| (C) | ಸಂವಿಧಾನ ರಚನಾ ಸಮಿತಿಯ ಉಪಾಧ್ಯಕ್ಷರು | (iii) | ಸಚ್ಚಿದಾನಂದ ಸಿನ್ಹಾ |
| (D) | ಸಂವಿಧಾನ ರಚನಾ ಸಮಿತಿಯ ಹಂಗಾಮಿ ಅಧ್ಯಕ್ಷರು | (iv) | ಡಾ. ಬಿ.ಆರ್. ಅಂಬೇಡ್ಕರ್ |
| (E) | ಸಂವಿಧಾನದ ಶಾಸನಾತ್ಮಕ ಸಲಹೆಗಾರರು | (v) | ಡಾ. ಬಾಬು ರಾಜೇಂದ್ರ ಪ್ರಸಾದ್ |
| | | (vi) | ಹೆಚ್.ಸಿ. ಮುಖರ್ಜಿ |
| | | (vii) | ಮಹಾತ್ಮ ಗಾಂಧಿ |

**III. ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಗ್ರಾಹಕ ನ್ಯಾಯಾಲಯವನ್ನು ಯಾವಾಗ ಸ್ಥಾಪಿಸಲಾಯಿತು ?

13. ಲೋಕ ಅದಾಲತ್ / ಜನತಾ ನ್ಯಾಯಾಲಯವನ್ನು ಏಕೆ ಸ್ಥಾಪಿಸಲಾಗಿದೆ ?

14. ನಮ್ಮ ಸಂವಿಧಾನದ 315ನೇ ವಿಧಿಯ ಪ್ರಾಮುಖ್ಯತೆ ಏನು ?

15. ರಾಜ್ಯ ಲೋಕಸೇವಾ ಆಯೋಗದ ಸದಸ್ಯರ ಅಧಿಕಾರಾವಧಿ ಏನು ?

16. ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆಯ ಪಿತಾಮಹ ಯಾರು ?

17. ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಯಾವ ದೇಶದ ಸಂವಿಧಾನದಿಂದ ಎರವಲು ಪಡೆಯಲಾಗಿದೆ ?

18. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಯಾವ ವಿಧಿಗಳಲ್ಲಿ ವಿವರಿಸಲಾಗಿದೆ ?

19. ಕೋ–ವಾರೆಂಟೊ ಎಂಬ ಪದವು ಹೇಗೆ ಬಂದಿದೆ ?

20. ಹೆಬಿಯಸ್ ಕಾರ್ಪಸ್ ಪದದ ಅರ್ಥವೇನು ?

21. ನಮ್ಮ ಸಂವಿಧಾನದ 32ನೇ ವಿಧಿಯನ್ನು ಡಾ. ಬಿ.ಆರ್. ಅಂಬೇಡ್ಕರ್ ಏನೆಂದು ಕರೆದಿದ್ದಾರೆ ?

22. ಭ್ರಾತೃತ್ವ ಎಂದರೇನು ?

23. ಜಾತ್ಯಾತೀತತೆ ಬಗ್ಗೆ ಜವಾಹರಲಾಲ್ ನೆಹರೂರವರ ಅಭಿಪ್ರಾಯವೇನು ?

24. ಇಂಗ್ಲೆಂಡ್ ಪ್ರಜಾಪ್ರಭುತ್ವ ರಾಷ್ಟ್ರವಾದರೂ ಗಣರಾಜ್ಯವಲ್ಲ. ಏಕೆ ?

25. ಮುಸ್ಲಿಂರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಿದ ಕಾಯ್ದೆ ಯಾವುದು ?

26. ಕೆ.ಸಿ. ವ್ಹೀರ್‌ರವರು ಭಾರತದ ಸಂವಿಧಾನವನ್ನು ಸಮತೋಲನ ಹೊಂದಿರುವ ಸಂವಿಧಾನವೆಂದು ಏಕೆ ಕರೆದಿದ್ದಾರೆ ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. ಜಾತ್ಯಾತೀತತೆಯ ತತ್ವಗಳನ್ನು ವಿವರಿಸಿ.

28. ಭಾರತದ ರಾಜಕೀಯ ಪದ್ಧತಿಯ ನಾಲ್ಕು ತಾತ್ವಿಕ ಸ್ತಂಭಗಳನ್ನು ಹೆಸರಿಸಿ.

29. ಮೂಲಭೂತ ಹಕ್ಕುಗಳ ಲಕ್ಷಣಗಳಾವುವು ?

30. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಹಿತಿ ಹಕ್ಕು ಕಾಯ್ದೆ ಅತ್ಯವಶ್ಯಕ. ಸಮರ್ಥಿಸಿ.

31. ರಾಜ್ಯನೀತಿ ನಿರ್ದೇಶಕ ತತ್ವಗಳ ಲಕ್ಷಣಗಳನ್ನು ತಿಳಿಸಿ.

32. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಹೇಗೆ ಸಾಧಿಸಿವೆ ?

33. ಉದಾರವಾದಿ ತತ್ವಗಳನ್ನು ಪಟ್ಟಿ ಮಾಡಿ.

34. ಕಂದಾಯ ನ್ಯಾಯಾಲಯಗಳನ್ನು ಹೆಸರಿಸಿ.

35. ಉಚ್ಛ ನ್ಯಾಯಾಲಯಗಳ ನ್ಯಾಯಾಧೀಶರುಗಳಿಗೆ ನೀಡಿರುವ ವಿನಾಯಿತಿಗಳೇನು ?

36. ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳನ್ನು ಹೆಸರಿಸಿ.

37. ತಾಲ್ಲೂಕು ಪಂಚಾಯಿತಿಯು ಹೊಂದಿರುವ ಸದಸ್ಯರುಗಳು ಯಾರು ?

38. ದಂಡು ಪ್ರದೇಶಗಳ ಆಡಳಿತವನ್ನು ಹೇಗೆ ನಿರ್ವಹಿಸಲಾಗುತ್ತಿದೆ ?

39. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರನ್ನು ಹೇಗೆ ಪದಚ್ಯುತಿಗೊಳಿಸಲಾಗುತ್ತದೆ ?

40. ರಾಜ್ಯ ಲೋಕಸೇವಾ ಆಯೋಗದ ಸದಸ್ಯರಾಗಲು ಬೇಕಾಗಿರುವ ಅರ್ಹತೆಗಳೇನು ?

41. ಸ್ವಾತಂತ್ರ್ಯದಂತೆಯೇ ಸಮಾನತೆಯು ಮುಖ್ಯ. ಏಕೆ ?

42. ಭಾರತವು ಸಾರ್ವಭೌಮತ್ವ ರಾಷ್ಟ್ರವಾಗಿದೆ. ವಿವರಿಸಿ.

43. ಪ್ರತಿಬಂಧಕಾಜ್ಞೆಯನ್ನು ವಿವರಿಸಿ.

44. ಸಂವಿಧಾನದ ತಿದ್ದುಪಡಿಯ ವಿಧಾನಗಳನ್ನು ವಿವರಿಸಿ.

45. ಭಾರತವು ಏಕಾತ್ಮಕ ಚೌಕಟ್ಟಿನೊಳಗೆ ಸಂಯುಕ್ತ ವ್ಯವಸ್ಥೆ ಹೊಂದಿದೆ. ಹೇಗೆ ?

46. ಗಾಂಧಿವಾದದ ತತ್ವಗಳನ್ನು ಪಟ್ಟಿಮಾಡಿ.

47. ಉಚ್ಚ ನ್ಯಾಯಾಲಯದ ಮನವಿ ಅಧಿಕಾರಗಳು ಯಾವುವು ?

48. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯ ಪ್ರಮುಖ ಲಕ್ಷಣಗಳನ್ನು ತಿಳಿಸಿ.

49. ಜಿಲ್ಲಾ ಪಂಚಾಯತಿಯ ಹಣಕಾಸಿನ ಮೂಲಗಳಾವುವು ?

50. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ವೇತನ ಮತ್ತು ಭತ್ಯೆಗಳ ಕುರಿತು ವಿವರಿಸಿ.

**V. ಈ ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ* ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

51. 1935 ರ ಭಾರತ ಸರ್ಕಾರದ ಕಾಯ್ದೆಯು ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಹೇಗೆ ?

52. ಭಾರತೀಯರಿಗೆ ನೀಡಿರುವ ಮೂಲಭೂತ ಹಕ್ಕುಗಳನ್ನು ಹೆಸರಿಸಿ.

53. ರಾಜ್ಯನೀತಿ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳನ್ನು ವ್ಯತ್ಯಯಿಸಿ.

54. ನಮ್ಮ ಸಂವಿಧಾನದ ಪ್ರಸ್ತಾವನೆಯನ್ನು ವಿವರಿಸಿ.

55. ಉಚ್ಚ ನ್ಯಾಯಲಯದ ಮೂಲ ಅಧಿಕಾರಗಳನ್ನು ವಿವರಿಸಿ.

56. ಮಹಾನಗರ ಪಾಲಿಕೆಯ ಕಾರ್ಯಗಳನ್ನು ತಿಳಿಸಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

57. ಗ್ರಾಮ ಪಂಚಾಯಿತಿಯ ಕಾರ್ಯಗಳು ಯಾವುವು ?